"ಮಧುರ ಮಕ್ಕಳೇ- ಭೋಲಾನಾಥ ತಂದೆ ಒಬ್ಬರೇ ನಿಮ್ಮ ಜೋಳಿಗೆಯನ್ನು ಜ್ಞಾನರತ್ನಗಳಿ0ದ ತು0ಬುತ್ತಾರೆ, ಅವರೇ ಕಲ್ಪ ವೃಕ್ಷದ ಬೀಜ ರೂಪ ಆಗಿದ್ದಾರೆ, ಅವರ ಹೋಲಿಕೆಯನ್ನು ಯಾರೊಂದಿಗೂ ಮಾಡಲು ಸಾಧ್ಯ ಇಲ್ಲ"

ಪ್ರಶ್ನೆ: ಅನೇಕ ಮಕ್ಕಳು ತಂದೆಗೂ ಮೋಸ ಮಾಡುವ ಪ್ರಯತ್ನ ಮಾಡುತ್ತಾರೆ, ಹೇಗೆ ಮತ್ತು ಏಕೆ?

ಉತ್ತರ: ತಂದೆಯನ್ನು ಯಥಾರ್ಥವಾಗಿ ತಿಳಿದುಕೊಳ್ಳದೇ ಇರುವ ಕಾರಣ ತಪ್ಪು ಮಾಡಿ ಮುಚ್ಚಿಡುತ್ತಾರೆ, ಸತ್ಯ ಹೇಳುವುದಿಲ್ಲ, ಸಭೆಯಲ್ಲಿ ಮುಚ್ಚಿಟ್ಟು ಕುಳಿತುಕೊಳ್ಳುತ್ತಾರೆ. ಧರ್ಮರಾಜ ಬಾಬಾ ಎಲ್ಲವನ್ನೂ ತಿಳಿದುಕೊ0ಡಿದ್ದಾರೆ ಎನ್ನುವುದು ಅವರಿಗೆ ಗೊತ್ತಿಲ್ಲ. ಸತ್ಯ ತಂದೆಗೆ ಸತ್ಯ ಹೇಳುವುದು ಶಿಕ್ಷೆಯನ್ನು ಕಡಿಮೆ ಮಾಡಿಕೊಳ್ಳುವ ಯುಕ್ತಿ ಆಗಿದೆ.

ಗೀತೆ: ಭೋಲಾನಾಥನಿಗಿಂತ ಭಿನ್ನ. . . .

ಓಂ ಶಾಂತಿ. ಭೋಲಾನಾಥ ಎಂದು ಸದಾಶಿವನಿಗೆ ಹೇಳಲಾಗುತ್ತದೆ ಎನ್ನುವುದು ಮಕ್ಕಳಿಗೆ ತಿಳಿದಿದೆ. ಭೋಲಾ ಭಂಡಾರಿ. ಶಂಕರನಿಗೆ ಭೋಲಾ ಭಂಡಾರಿ ಎಂದು ಹೇಳುವುದಿಲ್ಲ. ಅನ್ಯ ಯಾರಿಗೂ ಜ್ಞಾನಸಾಗರ ಎಂದು ಹೇಳುವುದಿಲ್ಲ. ನಾನೇ ಬಂದು ಮಕ್ಕಳಿಗೆ ಆದಿ, ಮಧ್ಯ ಅಂತ್ಯದ ಜ್ಞಾನ ಹೇಳುತ್ತೇನೆ ಎಂದು ತಂದೆ ಹೇಳುತ್ತಾರೆ. ಆದ್ದರಿಂದ ಜ್ಞಾನ ಸಾಗರ ಒಬ್ಬರಿಗೆ ಮಾತ್ರ ಹೇಳಲು ಸಾಧ್ಯ, ಶಂಕರನೂ ಅಲ್ಲ, ಅವ್ಯಕ್ತ ಬ್ರಹ್ಮಾನೂ ಸಹ ಅಲ್ಲ. ಅವ್ಯಕ್ತ ಬ್ರಹ್ಮಾ ಸೂಕ್ಷ್ಮವತನದಲ್ಲಿ ಇರುತ್ತಾರೆ. ಅನೇಕರು ಒಂದು ಮಾತಿನಲ್ಲಿ ಗೊಂದಲದಲ್ಲಿ ಬರುತ್ತಾರೆ ಏನೆಂದರೆ ದಾದಾರವರಿಗೆ ಭಗವಾನ್ ಬ್ರಹ್ಮಾ ಎಂದು ಏಕೆ ಹೇಳುತ್ತಾರೆ? ಆದರೆ ಅವ್ಯಕ್ತ ಬ್ರಹ್ಮಾರವರಿಗೂ ಸಹ ಭಗವಂತ ಎಂದು ಹೇಳಲು ಸಾಧ್ಯವಿಲ್ಲ. ನಾನೇ ನಿಮ್ಮ ಪಾರಲೌಕಿಕ ಪಿತ ಎಂದು ತಂದೆ ತಿಳಿಸಿಕೊಡುತ್ತಾರೆ. ಪರಲೋಕ ಎಂದು ಸ್ವರ್ಗಕ್ಕೆ ಅಥವಾ ನರಕಕ್ಕೆ ಹೇಳುವುದಿಲ್ಲ. ಪರಲೋಕ ಅಂದರೆ ಅತಿ ದೂರದಲ್ಲಿರುವ, ಆತ್ಮಗಳು ನಿವಾಸ ಮಾಡುವಂತಹ ಲೋಕ. ಆದ್ದರಿಂದ ಅವರಿಗೆ ಪರಮಪ್ರಿಯ ಪಾರಲೌಕಿಕ ಪರಮಪಿತ ಎಂದು ಹೇಳುತ್ತಾರೆ ಏಕೆಂದರೆ ಪರಲೋಕದಲ್ಲಿರುತ್ತಾರೆ. ಭಕ್ತಿ ಮಾರ್ಗದವರೂ ಸಹ ಪ್ರಾರ್ಥನೆ ಮಾಡುವಾಗ ಮುಖ ಮೇಲೆ ಮಾಡುತ್ತಾರೆ. ಆದ್ದರಿಂದ ನಾನು ಕಲ್ಪ ವೃಕ್ಷದ ಬೀಜ ರೂಪ ಆಗಿದ್ದೇನೆ ಎಂದು ತಂದೆ ತಿಳಿಸಿಕೊಡುತ್ತಾರೆ. ಒಬ್ಬರ ವಿನಹ ಬೇರೆ ಯಾರಿಗೂ ರಚಯಿತ ಎಂದು ಹೇಳಲು ಸಾಧ್ಯವಿಲ್ಲ. ಅವರೊಬ್ಬರೇ ರಚಯಿತ ಇನ್ನೆಲ್ಲವೂ ಅವರ ರಚನೆ ಆಗಿದೆ. ರಚಯಿತ ಮಾತ್ರ ರಚನೆಗೆ ಆಸ್ತಿ ಕೊಡುತ್ತಾರೆ. ಎಲ್ಲರೂ ನಮ್ಮನ್ನು ಈಶ್ವರ ಅಥವಾ ಖುದಾ ಹುಟ್ಟಿಸಿದ್ದಾರೆ ಎಂದು ಹೇಳುತ್ತಾರೆ. ಅ0ದಮೇಲೆ ಒಬ್ಬ ಈಶ್ವರನಿಗೆ ಎಲ್ಲರೂ ತ0ದೆ ಎ0ದು ಹೇಳುತ್ತಾರೆ. ಗಾ0ಧೀ ಅವರಿಗೆ ತಂದೆ ಎಂದು ಹೇಳುವುದಿಲ್ಲ. ಬೇಹದ್ದಿನ ರಚೈತ ತಂದೆ ಒಬ್ಬರೇ. ನಾನು ನಿಮ್ಮ ಪಾರಲೌಕಿಕ ಪರಮಪಿತ ಆಗಿದ್ದೇನೆ ಎಂದು ತಿಳಿಸುತ್ತಾರೆ. ಆತ್ಮರೆಲ್ಲರೂ ಒಂದೆ ಸಮನಾಗಿದ್ದಾರೆ, ಚಿಕ್ಕದು ದೊಡ್ಡದು ಇಲ್ಲ. ಜ್ಞಾನ ಸೂರ್ಯ, ಜ್ಞಾನ ಚ0ದ್ರಮ, ಜ್ಞಾನ ನಕ್ಷತ್ರಗಳು. . . ಆದರೆ ಆ ಸೂರ್ಯ ಚಂದ್ರರ ಆಕಾರದಲ್ಲಿ ಅಂತರ ಇರುತ್ತದೆ ಆದರೆ ಆತ್ಮರ ಆಕಾರ ಒಂದೇ ಆಗಿದೆ. ನಾನು ಆಕಾರದಲ್ಲಿ ದೊಡ್ಡವನೇನೂ ಇಲ್ಲ ಆದರೆ ಪರಮಧಾಮದಲ್ಲಿ ಇರುವುದರಿ0ದ ನನಗೆ ಪರಮಾತ್ಮ ಎಂದು ಹೇಳುತ್ತಾರೆ. ಪರಮಾತ್ಮನಲ್ಲಿಯೇ ಎಲ್ಲ ಜ್ಞಾನ ಇದೆ. ನಾನು ಹೇಗೆ ಅಶರೀರಿ ಆಗಿದ್ದೇನೆ ಅದೇ ರೀತಿ ಆತ್ಮಗಳೂ ಸಹ ಸ್ವಲ್ಪ ಸಮಯ ಪರಮಧಾಮದಲ್ಲಿ ಅಶರೀರಿ ಆಗಿರುತ್ತಾರೆ ಎಂದು ತಂದೆ ಹೇಳುತ್ತಾರೆ. ಆದರೆ ಸ್ಟೇಜಿನ ಮೇಲೆ ಹೆಚ್ಚು ಸಮಯ ಇರುತ್ತಾರೆ. ನೀವು ನಕ್ಷತ್ರದ ಸಮಾನ ಇರುವಂತೆ ನಾನೂ ಇದ್ದೇನೆ. ನಾನು ದೊಡ್ಡ ಆಕಾರದಲ್ಲಿ ಇದ್ದರೆ ಈ ಶರೀರದಲ್ಲಿ ಹಿಡಿಸುತ್ತಿರಲಿಲ್ಲ. ಅನ್ಯ ಎಲ್ಲ ಆತ್ಮಗಳು ಪಾತ್ರ ಮಾಡಲು ಬರುವಂತೆ ನಾನೂ ಬರುತ್ತೇನೆ. ಬಾಬಾರವರದು ಭಕ್ತಿ ಮಾರ್ಗದಿಂದ ಪಾತ್ರ ಆರಂಭ ಆಗುತ್ತದೆ. ಸತ್ಯ ಯುಗ ತ್ರೇತಾದಲ್ಲಿ ಪಾತ್ರವೇ ಇಲ್ಲ. ಈಗ ಸ್ವಯಂ ಬಂದು ನಮಗೆ ಪೂರ್ಣ ಆಸ್ತಿ ಕೊಡುತ್ತಾರೆ. ತಮಗಿಂತಲೂ ಸ್ವಲ್ಪ ಎತ್ತರದಲ್ಲಿ ಕರೆದೊಯ್ಯುತ್ತಾರೆ. ನಮ್ಮನ್ನು ಬ್ರಹ್ಮಾಂಡ ಮತ್ತು ಸೃಷ್ಟಿ ಎರಡರ ಮಾಲೀಕರನ್ನಾಗಿ ಮಾಡುತ್ತಾರೆ. ಮಕ್ಕಳನ್ನು ಯೋಗ್ಯರನ್ನಾಗಿ ಮಾಡುವುದು ಪ್ರತಿಯೊಬ್ಬ ತಂದೆಯ ಕರ್ತವ್ಯ ಆಗಿದೆ, ಎಷ್ಟು ಸೇವೆ ಮಾಡುತ್ತಾರೆ. ಕೆಲವರಿಗೆ 7 ಮಕ್ಕಳಿರುತ್ತಾರೆ, ಒಬ್ಬರು ಡಾಕ್ಟರ್, ಇಂಜಿನೀಯರ್, ವಕೀಲ ಆದಾಗ ತಂದೆಗೆ ಬಹಳ ಸಂತೋಷ ಆಗುತ್ತದೆ. ತಂದೆ ಎಲ್ಲಾ ಮಕ್ಕಳನ್ನು ಓದಿಸಿ ಯೋಗ್ಯರನ್ನಾಗಿ ಮಾಡಿದರು ಎಂದು ಜನರು ಅವರನ್ನು ಹೊಗಳುತ್ತಾರೆ. ಆದರೆ ಎಲ್ಲರೂ ಒಂದೇ ಸಮನಾಗುವುದಿಲ್ಲ. ಒಬ್ಬೊಬ್ಬರು ಒಂದೊಂದು ಆಗುತ್ತಾರೆ. ಅದೇ ರೀತಿ ಬಾಬಾ ಹೇಳುತ್ತಾರೆ ನಾನು ನಿಮ್ಮನ್ನು ಎಷ್ಟು ಯೋಗ್ಯರನ್ನಾಗಿ ಮಾಡುತ್ತೇನೆ. ಬಾಬಾರವರು ಹೇಗಿದ್ದಾರೆ ನೋಡಿ! ಬೇರೆಯವರ ಶರೀರದಲ್ಲಿ ಬಂದು ಕಲಿಸುತ್ತಾರೆ. ಇದು ಕಲ್ಪದ ಹಿಂದಿನಂತಹ ಪಾಠಶಾಲೆ ಆಗಿದೆ. ಅಂದಮೇಲೆ ಗೀತೆಯ ಭಗವಂತ ಗೀತಾ ಪಾಠಶಾಲೆಯನ್ನು ಅವಶ್ಯವಾಗಿ ಮಾಡಿದ್ದಾರೆ. ಇಲ್ಲಿ ಎಲ್ಲರಿಗೂ ಜ್ಞಾನದ ಹುಲ್ಲು, ಜ್ಞಾನ ಅಮೃತ ತಿನ್ನಿಸಲಾಗುತ್ತದೆ. ಕೆಲವರು ಕೃಷ್ಣನ ಗೋಶಾಲೆ, ಇನ್ನು ಕೆಲವರು ಬ್ರಹ್ಮನದು ಎಂದು ಹೇಳುತ್ತಾರೆ. ಆದರೆ ಇರುವುದೇನು, ಶಿವಬಾಬಾರವರಿಗೆ ಶರೀರ ಇಲ್ಲದಿರುವ ಕಾರಣ ಬ್ರಹ್ಮಾ ಎಂದು ಹೇಳಿದ್ದಾರೆ. ಇನ್ನು ಕೃಷ್ಣನಿಗಂತೂ ಗೋವುಗಳ ಪಾಲನೆ ಮಾಡುವ ಅವಶ್ಯಕತೆ ಇಲ್ಲ. ಕೃಷ್ಣನಿಗೆ ಪತಿತ ಪಾವನ ಎಂದು ಹೇಳುವುದಿಲ್ಲ. ಗಾ0ಧಿಯೂ ಸಹ ಗೀತೆಯನ್ನು ಹಿಡಿದು ಸೀತಾರಾಮ ಎಂದು ಹೇಳುತ್ತಿದ್ದರು ಏಕೆಂದರೆ ಅವರು ರಾಮ, ಕೃಷ್ಣ ಮೀನು-ಮೊಸಳೆ ಎಲ್ಲರಲ್ಲಿಯೂ

ಪರಮಾತ್ಮ ಇದ್ದಾರೆ ಎಂದು ತಿಳಿದಿದ್ದರು. ಮೊದಲು ನಾವೂ ಸಹ ಇದೇ ರೀತಿ ತಿಳಿದಿದ್ದೆವು. ನಮ್ಮ ಬುದ್ಧಿಗೆ ಬೀಗ ಹಾಕಲಾಗಿತ್ತು. ಈಗ ತಂದೆ ಬಂದು ಎಚ್ಚರಿಸಿದ್ದಾರೆ. ಎಲ್ಲರನ್ನೂ ಗೋರಿಯಿಂದ ಎಬ್ಬಿಸಿ ವಾಪಸ್ ಕರೆದುಕೊಂಡು ಹೋಗುತ್ತಾರೆ, ಸೊಳ್ಳೆಗಳ ಹಾಗೆ. ಪುನಃ ತಮ್ಮ ತಮ್ಮ ಸಮಯದ ಅನುಸಾರ ನಿಧಾನವಾಗಿ ಇಳಿಯುತ್ತಾರೆ.

ಒಬ್ಬ ತಂದೆ ಆದ ನನ್ನನ್ನು ನೆನಪು ಮಾಡಿ ಎಂದು ತಂದೆ ನಿಮಗೆ ತಿಳಿಸಿಕೊಡುತ್ತಾರೆ. ವಿದ್ಯಾರ್ಥಿಗಳಿಗೂ ಟೀಚರ್ನ ನೆನಪು ಇರುತ್ತದೆ. ನಿಮಗ0ತೂ ತಂದೆ ಓದಿಸುತ್ತಾರೆ. ಇವರೇ ನಿಮ್ಮ ಗುರು ಆಗಿದ್ದಾರೆ. ಮೂವರದೂ ಶಕ್ತಿ ಇದೆ. ಆದರೂ ಇಂತಹ ತಂದೆಯನ್ನು ಮರೆತುಬಿಡುತ್ತಾರೆ! ಪೂರ್ಣ ಪಕ್ಕಾ ಮಕ್ಕಳು ಎಂದು ಹೇಳಿಸಿಕೊಳ್ಳುವ ಮಕ್ಕಳೂ ಸಹ 5 ನಿಮಿಷ ನೆನಪು ಮಾಡುವುದಿಲ್ಲ. ಹೇ ಮಾಯೆ ನಾನು ಮಕ್ಕಳ ಬೀಗ ತೆರೆಯುತ್ತೇನೆ, ನೀನು ಹಾಕಿಬಿಡುತ್ತಿಯಾ ಎಂದು ತಂದೆಯು ಹೇಳುತ್ತಾರೆ. ಸ್ವಲ್ಪ ವಿಕಾರದಲ್ಲಿ ಹೋದರೂ ಸಾಕು ಬುದ್ಧಿಗೆ ಬೀಗ ಬಿದ್ದು ಬಿಡುತ್ತದೆ. ಆದರೂ ಸತ್ಯ ಹೇಳುವುದರಿ0ದ ಶಿಕ್ಷೆ ಕಡಿಮೆ ಆಗುತ್ತದೆ. ನೀವೇ ಹೋಗಿ ಜಡ್ಜ್ ನಿಮ್ಮ ದೋಷ ಹೇಳಿದರೆ ಶಿಕ್ಷೆ ಕಡಿಮೆ ಮಾಡುತ್ತಾರೆ. ತಂದೆಯೂ ಸಹ ಅದೇ ರೀತಿ ಮಾಡುತ್ತಾರೆ, ಏನಾದರು ಕೆಟ್ಟ ಕೆಲಸ ಮಾಡಿ ಮುಚ್ಚಿಟ್ಟರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಾರೆ. ಆದ್ದರಿಂದ ಏನನ್ನೂ ಮುಚ್ಚಿಡಬಾರದು. ವಿಕಾರದಲ್ಲಿ ಹೋಗಿ ಮುಚಿಟ್ಟುಕೊಂಡು ಸಭೆಯಲ್ಲಿ ಕುಳಿತುಕೊಳ್ಳುವವರು ಬಹಳ ಇದ್ದಾರೆ ಆದರೆ ಧರ್ಮರಾಜನಿಂದ ಏನು ಮುಚ್ಚಿಡಲು ಸಾಧ್ಯ? ನಿಶ್ಚಯ ಇಲ್ಲದಿದ್ದರೆ ಈ ರೀತಿ ತಂದೆಗೂ ಮೋಸ ಮಾಡುವ ಪ್ರಯತ್ನ ಮಾಡುತ್ತಾರೆ. ಸಾಕಾರ ತಂದೆಗೆ ಮೋಸ ಮಾಡಬಹುದು ಆದರೆ ನಿರಾಕಾರ ಬಾಬಾ ಅವರಿಗೆ ಎಲ್ಲವೂ ಗೊತ್ತಿದೆ, ನಿಮಗೆ ಈ ತನುವಿನ ಮೂಲಕ ಶಿಕ್ಷಣ ಕೊಡುವವರೂ ಅವರೇ ಆಗಿರುವರು. ನಿಮ್ಮನ್ನು ಬಹಳ ಜನ ಕೇಳುತ್ತಾರೆ ದಾದಾ ಅವರ ತನುವಿನಲ್ಲಿ ಪರಮಾತ್ಮ ಹೇಗೆ ಬರುತ್ತಾರೆ? ಇವರ0ತೂ ಗೃಹಸ್ಥರಾಗಿದ್ದರು. ಮಕ್ಕಳು ಮರಿಗಳಿದ್ದರು, ಇವರಲ್ಲಿ ಹೇಗೆ ಬರುತ್ತಾರೆ, ಸಾಧು ಸ0ತರ ತನುವಿನಲ್ಲಿ ಏಕೆ ಬರುವುದಿಲ್ಲ? ಆದರೆ ಪರಮಾತ್ಮ ಪತಿತರನ್ನು ಪಾವನ ಮಾಡಬೇಕಾಗಿದೆ. ಪೂಜಾರಿಯಿ0ದ ಪೂಜ್ಯ ಮಾಡುತ್ತಾರೆ, ಇದು ಪಲ್ಟಿ ಆಟ ಆಗಿದೆ. ಬ್ರಾಹ್ಮಣರೇ ದೇವತೆ ನ0ತರ ಕ್ಷತ್ರೀಯ, ವೈಶ್ಯ. . . ಈ ವರ್ಣಗಳೂ ಭಾರತದಲ್ಲಿವೆ. ಇನ್ನೆಲ್ಲಿಯೂ ಈ ವರ್ಣಗಳಿಲ್ಲ. ಈಗ ನಾನು 15 ನಿಮಿಷ ಭಾಷಣ ಮಾಡಿದೆ ಇದೇ ರೀತಿ ನೀವೂ ತಿಳಿಸಿಕೊಡಬೇಕು. ಬಾಬಾ ನೇರವಾಗಿ ಮಾತನಾಡುತ್ತಾರೆ. ಶಿವ ಬೇರೆ ಶಂಕರ ಬೇರೆ ಎ0ದು ಶಿವಬಾಬಾ ತಿಳಿಸುತ್ತಾರೆ - ಇದನ್ನು ಸ್ಪಷ್ಟವಾಗಿ ತಿಳಿಸಬೇಕು. ಇದಾಗಿದೆ ಬಾಬಾರವರ ಪರಿಚಯ ಕೊಡುವುದು. ಸರ್ಕಾರದ ಪುಸ್ತಕ ಹೊರಡುತ್ತದೆ - ಯಾರು ಏನಾಗಿದ್ದಾರೆ. ಅದೇ ರೀತಿ ಪೂರ್ವ ನಿಗದಿತ ನಾಟಕದಲ್ಲಿ ಯಾರು ಏನಾಗಿದ್ದಾರೆ - ಶ್ರೇಷ್ಠಾತಿ ಶ್ರೇಷ್ಠ ಶಿವಬಾಬಾ, ನ0ತರ ಬ್ರಹ್ಮಾ, ವಿಷ್ಣು, ಶ0ಕರ, ನ0ತರ ಲಕ್ಷ್ಮೀ ನಾರಾಯಣ, ಸೀತಾ-ರಾಮ ನ0ತರ ಧರ್ಮ ಸ್ಥಾಪಕರು. ಈ ರೀತಿ ಜಗತ್ತು ಹಳೆಯದಾಗುತ್ತದೆ. ನೀವು ದೇವತೆಗಳು ವಾಮ ಮಾರ್ಗದಲ್ಲಿ ಹೋಗುತ್ತೀರಿ. ಈಗ ತ0ದೆ ಬ0ದು ಜಾಗೃತ ಮಾಡುತ್ತಾರೆ, ಎಲ್ಲವನ್ನೂ ನನಗೆ ಅರ್ಪಣೆ ಮಾಡಿರಿ ಮತ್ತು ನನ್ನ ಮತದನುಸಾರ ನಡೆಯಿರಿ ಎ0ದು ಹೇಳುತ್ತಾರೆ. ಶ್ರೀಮತ ಅವರದೇ ಇದೆ.

ಇನ್ನು ಲಕ್ಷ್ಮೀ-ನಾರಾಯಣ, ಸೀತಾ-ರಾಮ, ಯಾರನ್ನು ನೆನಪು ಮಾಡುತ್ತಾರೆ ಅವರೆಲ್ಲರೂ ವಾಮ ಮಾರ್ಗದಲ್ಲಿ ಹೋಗಿದ್ದಾರೆ, ಯಾರು ಶ್ರೀಮತ ಕೊಡಲು ಸಾಧ್ಯ. ಭಕ್ತರ ಮನೋಕಾಮನೆಗಳನ್ನು ಬಾಬಾ ಅವರೇ ಪೂರ್ಣ ಮಾಡುತ್ತಾರೆ, ಯಾರಾದರೂ ಮೀನು, ಮೊಸಳೆಯಲ್ಲಿ ಭಾವನೆ ಇಟ್ಟಿದ್ದರೂ ನಾನೇ ಅವರ ಭಾವನೆಯನ್ನು ಪೂರ್ಣ ಮಾಡುತ್ತೇನೆ. ಮೀನು ಮೊಸಳೆಯಲ್ಲಿಯೂ ಭಗವ0ತ ಇರುತ್ತಾನೆ ಎ0ದು ಅರ್ಥ ಮಾಡಿಕೊ0ಡಿದ್ದಾರೆ. ತಂದೆಯು ಬಹಳ ರಹಸ್ಯವನ್ನು ತಿಳಿಸಿಕೊಟ್ಟಿದ್ದಾರೆ. ಆದರೆ ತಿಳಿಸಿಕೊಡುವವರು ನ0ಬರ್ವಾರಾಗಿ ಇದ್ದರೆ ಪದವಿಯೂ ನ0ಬರ್ವಾರಾಗಿ ಇರುತ್ತದೆ. ದೈವೀ ರಾಜ್ಯ ಸ್ಥಾಪನೆ ಆಗುತ್ತಿದೆ, ಧರ್ಮ ಅಲ್ಲ. ಧರ್ಮವನ್ನು ಅನ್ಯ ಧರ್ಮದವರು ಸ್ಥಾಪನೆ ಮಾಡುತ್ತಾರೆ. ತಂದೆ ಬ್ರಹ್ಮಾರವರ ಮೂಲಕ ರಾಜರುಗಳ ರಾಜರನ್ನಾಗಿ ಮಾಡುತ್ತಾರೆ. ರಾಜರಿಗೆ ರಾಜರು ಇದರ ಅರ್ಥವನ್ನೂ ಸಹ ತಿಳಿಸಿಕೊಟ್ಟಿದ್ದಾರೆ. ನಿಮ್ಮನ್ನು ವಿಕಾರಿ ರಾಜರು ಪೂಜೆ ಮಾಡುತ್ತಾರೆ, ಅ0ದಮೇಲೆ ನಿಮಗೆ ಎ0ತಹ ದೊಡ್ಡ ಪದವಿ ಸಿಗುತ್ತದೆ. ತಂದೆಯ ಮಧುರಾತಿಮಧುರ ಮಾತುಗಳು ನಿಮಗೆ ಬಹಳ ಇಷ್ಟ ಆಗುತ್ತದೆ ಆದರೆ ಎದ್ದು ಚಹಾ ಕುಡಿದರೆ ನಶೆ ಕಡಿಮೆ ಆಗಿಬಿಡುತ್ತದೆ. ಊರಿಗೆ ಹೋದರೆ ಪೂರ್ತಿ ಇಳಿದುಬಿಡುತ್ತದೆ. ಇಲ್ಲಿ ನೀವು ತಂದೆಯ ಮನೆಯಲ್ಲಿ ಕುಳಿತಿರುವಿರಿ. ಅಲ್ಲಿ ಬಹಳ ವ್ಯತ್ಯಾಸ ಆಗುತ್ತದೆ. ಪತಿ ಪರದೇಶಕ್ಕೆ ಹೋದರೆ ಪತ್ನಿ ಬಹಳ ಅಳುತ್ತಾಳೆ. ಅವರೇನು ಸುಖ ಕೊಡುವುದಿಲ್ಲ, ತಂದೆ ನಿಮಗೆ ಎಷ್ಟು ಸುಖ ಕೊಡುತ್ತಾರೆ, ಆದ್ದರಿ0ದ ಬಿಟ್ಟು ಹೋಗುವಾಗ ಅಳು ಬರುತ್ತದೆ! ಅನೇಕರು ನಾವು ಇಲ್ಲಿಯೇ ಇರುತ್ತೇವೆ ಎ0ದು ಹೇಳುತ್ತಾರೆ. ಹಾಗಾದರೆ ನಿಮ್ಮ ಮಕ್ಕಳು ಎಲ್ಲಿ ಹೋಗಬೇಕು? ನೀವೇ ಸ0ಭಾಲನೆ ಮಾಡಿರಿ ಎ0ದು ಹೇಳುತ್ತಾರೆ. ನಾವು ಎಷ್ಟು ಜನರ ಮಕ್ಕಳನ್ನು ಸ0ಭಾಲನೆ ಮಾಡಬೇಕು! ಸೇವಾಧಾರಿ ಇರಬಹುದು, ಆದರೆ ನಿಮ್ಮ ಮಕ್ಕಳಿಗೂ ವ್ಯವಸ್ಥೆ ಮಾಡಾಲಾಗುತ್ತದೆ. ಪ್ರಾರ0ಭದಲ್ಲಿ ಸ್ವಲ್ಪ ಇದ್ದರು ಆದ್ದರಿ0ದ ಅವರ ಮಕ್ಕಳನ್ನು ಸ0ಭಾಲನೆ ಮಾಡಿದೆವು ಈಗ ಎಷ್ಟು ಇದ್ದಾರೆ. ಅವರ ಮಕ್ಕಳನ್ನು ಸ0ಭಾಲನೆ ಮಾಡಬೇಕು, ಅವರಲ್ಲಿ ಯಾರಾದರೂ ಕಳೆದು ಹೋದರೆ, ನಮ್ಮ ಮಕ್ಕಳನ್ನು ಕಳೆದು ಬಿಟ್ಟರು ಎ0ದು ಹೇಳುತ್ತಾರೆ. ಸ0ಭಾಲನೆ ಮಾಡಲು ಯಾರನ್ನಾದರೂ ಇಟ್ಟರೆ- ನಾವು ಏಕೆ ಅನ್ಯರ ಕರ್ಮಬ0ಧನವನ್ನು ಸ0ಭಾಲನೆ ಮಾಡಬೇಕು ಎ0ದು ಅವರೂ ಹೇಳುತ್ತಾರೆ. ಒಳ್ಳೆಯದು ಹಾಗಾದರೆ ನೀವು ಒಬ್ಬ ಶಿವಬಾಲಕನನ್ನು ಸ0ಭಾಲನೆ ಮಾಡಿರಿ ಆಗ ಅವರು ನಿಮ್ಮ ಮಕ್ಕಳನ್ನು ಸ0ಭಾಲನೆ ಮಾಡುತ್ತಾರೆ. ಆದರೆ ಇ0ತಹ ತಂದೆಗೆ ವಿಚ್ಛೇದನ ಮಾತ್ರ ಕೊಡಬೇಡಿ. ಹೀಗೆ ಅನೇಕರು ವಿಚ್ಛೇದನ ಕೊಟ್ಟರು. ಅವರಿಗೆ ಮೂರ್ಖರ ಅವತಾರ ಎ0ದು ಹೇಳಬೇಕು.

ಬ್ರಹ್ಮಾ ಕುಮಾರ ಕುಮಾರಿಯಿ0ದ ಮುನಿಸಿಕೊ0ಡರೂ ತಂದೆಯಿಂದ ಮಾತ್ರ ಮುನಿಸಿಕೊಳ್ಳಬೇಡಿ. ಅವರು ನಿಮಗೆ ರಾಜ್ಯ ಭಾಗ್ಯ ಕೊಡಲು ಬ0ದಿರುವರು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗೆ ಮುಖ್ಯಸಾರ:

1. ನಿಮ್ಮದೆಲ್ಲವನ್ನೂ ತ0ದೆಗೆ ಒಪ್ಪಿಸಿ ಪೂರ್ಣ ಶ್ರೀಮತದ0ತೆ ನಡೆಯಿರಿ.

2. ತ0ದೆಯಿ0ದ ಎ0ದೂ ಮುನಿಸಿಕೊಳ್ಳಬಾರದು. ಸೇವಾಧಾರಿ ಆಗಿರಬೇಕು.

ವರದಾನ: ಸಂಗಮಯುಗದ ಪ್ರತಿ ಘಳಿಗೆಯನ್ನು ಉತ್ಸವದ ರೂಪದಲ್ಲಿ ಆಚರಿಸುವಂತಹ ಸದಾ ಉಮಂಗ-ಉತ್ಸಾಹ ಸಂಪನ್ನ ಭವ

ಯಾವುದೇ ಉತ್ಸವ, ಉಮಂಗ ಉತ್ಸಾಹಕ್ಕಾಗಿ ಆಚರಿಸುತ್ತಾರೆ. ತಾವು ಬ್ರಾಹ್ಮಣ ಮಕ್ಕಳ ಜೀವನವೇ ಉತ್ಸಾಹದಿಂದ ತುಂಬಿದ ಜೀವನವಾಗಿದೆ. ಹೇಗೆ ಈ ಶರೀರದಲ್ಲಿ ಶ್ವಾಸವಿದ್ದರೆ ಜೀವನ ಹಾಗೆ ಬ್ರಾಹ್ಮಣ ಜೀವನದ ಶ್ವಾಸವೇ ಉಮಂಗ-ಉತ್ಸಾಹವಾಗಿದೆ ಆದ್ದರಿಂದ ಸಂಗಮಯುಗದ ಪ್ರತಿ ಘಳಿಗೆ ಉತ್ಸವವಾಗಿದೆ. ಆದರೆ ಶ್ವಾಸದ ವೇಗ ಸದಾ ಏಕರಸ, ಸಾಮಾನ್ಯವಾಗಿರಬೇಕು. ಒಂದುವೇಳೆ ಶ್ವಾಸದ ಗತಿ ಬಹಳ ವೇಗವಾಗಲಿ ಅಥವಾ ನಿಧಾನವಾಗಲಿ ಇದ್ದಾಗ ಯಥಾರ್ಥಜೀವನ ಎಂದು ಹೇಳಲಾಗುವುದಿಲ್ಲ. ಆದ್ದರಿಂದ ಚೆಕ್ ಮಾಡಿಕೊಳ್ಳಿ ಬ್ರಾಹ್ಮಣ ಜೀವನದಲ್ಲಿ ಉಮಂಗ-ಉತ್ಸಾಹದ ಗತಿ ಸಾಮಾನ್ಯ ಅರ್ಥಾತ್ ಏಕರಸವಾಗಿದೆಯೇ ಎಂದು.

ಸ್ಲೋಗನ್: ಸರ್ವಶಕ್ತಿಗಳ ಖಜಾನೆಯಿಂದ ಸಂಪನ್ನರಾಗಿರುವುದು-ಇದೇ ಬ್ರಾಹ್ಮಣ ಸ್ವರೂಪದ ವಿಶೇಷತೆಯಾಗಿದೆ.

ಮಾತೇಶ್ವರಿಜೀಯವರ ಅಮೂಲ್ಯ ಮಹಾವಾಕ್ಯಗಳು

1. ಮನುಷ್ಯರು ಗೀತೆಯನ್ನು ಹಾಡುತ್ತಾರೆ ಓ ಗೀತೆಯ ಭಗವಂತ ನಿಮ್ಮ ವಚನವನ್ನು ನಿಭಾಯಿಸಲು ಬನ್ನಿ ಎಂದು. ಈಗ ಅವರು ಸ್ವಯಂ ಗೀತೆಯ ಭಗವಂತ ಕಲ್ಪದ ಮೊದಲಿನ ವಚನ ಪಾಲನೆ ಮಾಡಲು ಬಂದಿದ್ದಾರೆ ಹಾಗೂ ಹೇಳುತ್ತಾರೆ. ಮಕ್ಕಳೇ, ಯಾವಾಗ ಭಾರತದಲ್ಲಿ ಅತೀ ಧರ್ಮ ಗ್ಲಾನಿ ಆಗುತ್ತದೆಯೊ ಅಂತಹ ಸಮಯದಲ್ಲಿ ನನ್ನ ವಚನವನ್ನು ನಿಭಾಯಿಸಲು ಅವಶ್ಯವಾಗಿ ಬರುತ್ತೇನೆ. ಈಗ ನಾನು ಬಂದಿರುವ ಅರ್ಥ ಇದಲ್ಲ - ನಾನು ಯುಗೇ-ಯುಗೇ ಬರುತ್ತೇನೆ ಎಂದು. ಎಲ್ಲಾ ಯುಗದಲ್ಲಿಯೂ ಧರ್ಮ ಗ್ಲಾನಿ ಏನು ಆಗುವುದಿಲ್ಲ, ಧರ್ಮ ಗ್ಲಾನಿ ಆಗುವುದು ಕಲಿಯುಗದಲ್ಲಿ. ಹಾಗಾದರೆ ಪರಮಾತ್ಮ ಕಲಿಯುಗದ ಸಮಯದಲ್ಲೆ ಬರುತ್ತಾರೆ ಹಾಗೂ ಕಲಿಯುಗ ಮತ್ತು ಕಲಿಯುಗ ಕಲ್ಪ-ಕಲ್ಪವೂ ಬರುತ್ತದೆ ಎಂದ ಮೇಲೆ ನಾನು ಕಲ್ಪ-ಕಲ್ಪವೂ ಬರುತ್ತೇನೆ. ಕಲ್ಪದಲ್ಲಿ 4 ಯುಗಗಳಿವೆ. ಇದನ್ನೇ ಕಲ್ಪ ಎಂದು ಹೇಳಲಾಗುತ್ತದೆ. ಅರ್ಧ ಕಲ್ಪ ಸತ್ಯಯುಗ ತ್ರೇತದಲ್ಲಿ ಸತೋಗುಣಿ ಸತೋಪ್ರಧಾನರಿರುತ್ತಾರೆ. ಅಲ್ಲಿ ಪರಮಾತ್ಮ ಬರುವ ಯಾವುದೇ ಅವಶ್ಯಕತೆ ಇರುವುದಿಲ್ಲ ಮತ್ತು ಮೂರನೆಯ ದ್ವಾಪರ ಯುಗದಿಂದ ಅನ್ಯ ಧರ್ಮಗಳ ಪ್ರಾರಂಭವಾಗುತ್ತದೆ. ಆ ಸಮಯದಲ್ಲೂ ಅತಿಯಾದ ಧರ್ಮ ಗ್ಲಾನಿಯಾಗಿರುವುದಿಲ್ಲ. ಇದರಿಂದ ಸಿದ್ಧವಾಗುತ್ತದೆ ಪರಮಾತ್ಮನು 100 ಯುಗಗಳಲ್ಲಿ ಬರುವುದಿಲ್ಲ. ಬಾಕಿ ಉಳಿದಿರುವುದು ಕಲಿಯುಗ ಅದರ ಅಂತ್ಯದಲ್ಲಿ ಅತೀ ಧರ್ಮ ಗ್ಲಾನಿ ಆಗುತ್ತದೆ. ಅದೇ ಸಮಯ ಪರಮಾತ್ಮ ಬಂದು ಅಧರ್ಮದ ವಿನಾಶ ಮಾಡಿ ಸತ್ಯ ಧರ್ಮದ ಸ್ಥಾಪನೆ ಮಾಡುತ್ತಾರೆ. ಒಂದು ವೇಳೆ ದ್ವಾಪರದಲ್ಲಿ ಬಂದಿದ್ದರೆ ಆಗ ದ್ವಾಪರದ ನಂತರ ಈಗ ಸತ್ಯಯುಗವಾಗಿರಬೇಕಾಗಿತ್ತು. ಹಾಗಾದರೆ ಕಲಿಯುಗ ಏಕೆ ಆಯಿತು. ಪರಮಾತ್ಮನು ಘೋರ ಕಲಿಯುಗವನ್ನು ಸ್ಥಾಪನೆ ಮಾಡಿದರೆಂದು ಹೇಳಲಾಗುವುದಿಲ್ಲ. ಈ ಮಾತಂತು ಆಗಲು ಸಾಧ್ಯವಿಲ್ಲ. ಆದ್ದರಿಂದ ಪರಮಾತ್ಮ ಹೇಳುತ್ತಾರೆ ನಾನೊಬ್ಬನೇ ಆಗಿದ್ದೇನೆ ಹಾಗೂ ಒಂದೇ ಬಾರಿ ಬಂದು ಅಧರ್ಮದ, ಕಲಿಯುಗದ ವಿನಾಶ ಮಾಡಿ ಸತ್ಯಯುಗ ಸ್ಥಾಪನೆ ಮಾಡುತ್ತೇನೆ. ಹಾಗಾದರೆ ನಾನು ಬರುವ ಸಮಯ ಸಂಗಮಯುಗವಾಗಿದೆ.

2. ಈಗ ನಾವಂತು ತಿಳಿದುಕೊಂಡಿದ್ದೇವೆ - ಮನುಷ್ಯಾತ್ಮನ ಅದೃಷ್ಟವನ್ನು ಮಾಡುವವರು ಯಾರು ಹಾಗೂ ಅದೃಷ್ಟವನ್ನು ಹಾಳು ಮಾಡಿಕೊಳ್ಳುವವರು ಯಾರು? ಅದೃಷ್ಟವನ್ನು ಮಾಡುವವರು ಹಾಗೂ ಹಾಳು ಮಾಡುವವರು ಒಬ್ಬರೇ ಪರಮಾತ್ಮ ಎಂದು ನಾವು ಹೇಳಲು ಸಾಧ್ಯವಿಲ್ಲ. ಬಾಕಿ ಅದೃಷ್ಟವನ್ನು ಮಾಡುವವರಂತು ಪರಮಾತ್ಮನೇ ಆಗಿದ್ದಾರೆ ಮತ್ತು ಅದೃಷ್ಟವನ್ನು ಹಾಳುಮಾಡಿಕೊಳ್ಳುವವರು ಸ್ವಯಂ ಮನುಷ್ಯರಾಗಿದ್ದಾರೆ. ಈಗ ಈ ಅದೃಷ್ಟ ಹೇಗೆ ಆಗುತ್ತದೆ ಹಾಗು ಹೇಗೆ ಬೀಳುತ್ತದೆ ಇದರ ಮೇಲೆ ತಿಳಿಸಲಾಗುತ್ತದೆ. ಮನುಷ್ಯ ಎಲ್ಲಿಯವರೆಗೂ ತನ್ನನ್ನು ತಿಳಿದುಕೊಳ್ಳುತ್ತಾರೆ ಹಾಗೂ ಪವಿತ್ರರಾಗಿ ಇರುತ್ತಾರೆ ಆಗ ಮತ್ತೆ

ಹಾಳಾಗಿರುವ ಅದೃಷ್ಟವನ್ನು ಸರಿಯಾಗಿ ಮಾಡಿಕೊಳ್ಳುತ್ತಾರೆ. ಈಗ ಹಾಳಾಗಿರುವ ಅದೃಷ್ಟ ಎಂದು ಹೇಳುತ್ತಾರೆಂದರೆ ಯಾವುದೋ ಸಮಯ ಅದೃಷ್ಟ ಚೆನ್ನಾಗಿತ್ತು. ಯಾವುದು ಈಗ ಹಾಳಾಗಿ ಹೋಗಿದೆ. ಈಗ ಅದೇ ಹಾಳಾಗಿರುವ ಅದೃಷ್ಟವನ್ನು ಪರಮಾತ್ಮ ಸ್ವತಃವಾಗಿ ಬಂದು ಸರಿಯಾಗಿ ಮಾಡುತ್ತಾರೆ. ಈಗ ಕೆಲವರು ಹೇಳುತ್ತಾರೆ ಪರಮಾತ್ಮ ಸ್ವಯಂ ನಿರಾಕಾರನಾಗಿದ್ದಾರೆ ಎಂದ ಮೇಲೆ ಅವರು ಹೇಗೆ ಅದೃಷ್ಟವನ್ನು ಸರಿ ಪಡಿಸುತ್ತಾರೆ. ಇದರ ಮೇಲೆ ತಿಳಿಸಲಾಗುತ್ತದೆ ನಿರಾಕಾರ ಪರಮಾತ್ಮ ಹೇಗೆ ಸಾಕಾರ ಬ್ರಹ್ಮನ ತನುವಿನ ಮುಖಾಂತರ ಅವಿನಾಶಿ ಜ್ಞಾನದ ಮೂಲಕ ನಮ್ಮ ಹಾಳಾಗಿರುವ ಅದೃಷ್ಟವನ್ನು ಸರಿ ಪಡಿಸುತ್ತಾರೆ. ಈಗ ಈ ಜ್ಞಾನವನ್ನು ಕೊಡುವುದು ಪರಮಾತ್ಮನ ಕೆಲಸವಾಗಿದೆ, ಬಾಕಿ ಮನುಷ್ಯಾತ್ಮ ಒಬ್ಬಿಬ್ಬರ ಅದೃಷ್ಟವನ್ನು ಬೆಳಗಿಸಲು ಸಾಧ್ಯವಿಲ್ಲ. ಅದೃಷ್ಟವನ್ನು ಬೆಳಗಿಸುವವರು ಒಬ್ಬ ಪರಮಾತ್ಮನೇ ಆಗಿದ್ದಾರೆ. ಹಾಗಾಗಿ ಅವರಿಗೆ ಅವರ ನೆನಪಾರ್ಥ ಮಂದಿರ ಖಾಯಂ ಆಗಿದೆ. ಒಳ್ಳೆಯದು. ಓಂ ಶಾಂತಿ.